ಟೇಬಲ್, ಕುರ್ಚಿ, ಮಿನರಲ್ ನೀರು, ಮನೆ ಅಲಂಕಾರದ ವ್ಯವಸ್ಥೆ, ಹೋಲ್‌ಸೇಲ್ ರೇಟಿನೊಳಗ ಸ್ವೀಟಿಗೆ ಬೇಕಾಗುವ ಖೋವಾ, ಹಾಲು, ಮೊಸರು, ಬಾಳಿ ಎಲಿ ಹೀಗೆ ಪ್ರತಿಯೊಂದನ್ನೂ ಒದಗಿಸುತಿದ್ದು ಊರ ಜನರಿಗೆ, ''ಸುನಂದಾಗ ಹೇಳಿದ್ರ ಎಲ್ಲಾ ವ್ಯವಸ್ಥಾ ಖಾತ್ರಿ ಆಗ್ತದ'' ಎಂಬ ಭರವಸೆ ಮೂಡತೊಡಗಿತು.

ಯಂಕಂಚಿ ಅನಿಲನ ಹಮೇಶಾ ಗುತ್ತಾ ಇದ್ದ ಮನಿಗಳು, ಘುತ್ತರಗಿಯ ಭೀಮಸೇನನ ಖಾತ್ರಿಮನಿಗಳು ಇನ್ನೂ ಕೆಲವರ ಮನಿಗಳು ಸುನಂದಾಳ ಪಾಲಾಗಿದ್ದು ಎಲ್ಲರಿಗೂ ಮುಶ್ಕಿಲ್ ಆಗಿತ್ತು. ಅವರವರಲ್ಲೇ ಚರ್ಚೆ ನಡದು, ''ಹಿಂಗೆ ಬಿಟ್ರ ಸುನಂದಾಬಾಯಿ ಕಲ್ಯಾಣ ಮಂಟಪನೇ ಕಟ್ಟಿಸಿಬಿಡ್ತಾಳ. ಆಗ ನಾವು ಅಲ್ಲಿ ಅಡುಗೆಗೆ ಹೋಗಬೇಕಾಗ್ತದ'' ಎಂದು ತಮ್ಮ ಆತಂಕಗಳನ್ನು ಹೊರಹಾಕುತ್ತಿದ್ದರು. ''ಏನಿಲ್ಲ ಅಕಿ ಹಿಂದ ಪೇಂದ್ಯಾ ಹಾನಲ್ಲ... ಆ ರಮೇಶನ್ನ ಅವನ್ನ ಆಕಿಲಿಂದ ಕಿತ್ತಿ ಬಿಡಿಸಿ ಈ ಕಡೆ ತಗೋಬೇಕು. ಅವಾಗ ಆಕಿ ಕುಣಿತ ಕಮ್ಮಿ ಆಗ್ತದ. ಅವನ ಬಲದ ಮ್ಯಾಲೆ ಇಷ್ಟೆಲ್ಲಾ ಉರಿಲಿಕತ್ತಾಳ'' ಅಂದ ಅನಿಲ. ''ಕರ್ಮ... ಅವನೆಲ್ಲಿ ಬಿಡ್ತಾನ? ಸತ್ರೂ ಸುನಂದಾಬಾಯಿ ಸೆರಗಿಗೇ ಉರಲು ಹಾಕ್ಕೋತ್ತಾನ. ಇವ ಬಿಟ್ರೂ ಆಕಿ ಬಿಡಂಗಿಲ್ಲ. ಯಾಕಂದ್ರ... ಗಂಡನ ಜಾಗ ಭರ್ತಿ ಮಾಡಿ ಬಿಟ್ಟಾನ'' ಎಂದು ಕೊಳಕು ನಗೆ ನಕ್ಕ ದತ್ತು.

ಈ ಎಲ್ಲ ಮಾತುಗಳು ಸೂಕ್ಷ್ಮವಾಗಿ ಸುನಂದಾ ಕಿವಿಗೆ ಬಿದ್ದಿರಲಿಕ್ಕೆ ಸಾಧ್ಯ. ಹಾಗಾಗಿ ಒಂದೊಂದು ದಿನ ಆಕೆ ಅನ್ಯಮನಸ್ಕಳಾಗಿರುತ್ತಾಳೆ. ಅಂತಹ ದಿನ ರಾಧಾಬಾಯಿ ಅವರ ಮನೆಯೊಳಗೆ ಭಕ್ರಿ, ಚಪಾತಿ ದಪ್ಪ ಆಗಿರುತ್ತಾವ, ರುಚಿನೂ ಕಳಕೊಂಡಿರುತ್ತಾವ. ಅಂತಹ ದಿನಪೂರ್ತಿ ಮನಸ್ಸು ವ್ಯಗ್ರ. ಯಾರಿಗೊತ್ತು... ಅವಳದೂ ಉಪ್ಪು ಖಾರ ತಿಂದ ದೇಹ. ಹರೆಯ ಮೈಮುರಿದು ಧುತ್ ಅಂತ ಕುಣಿಯುತ್ತಿದ್ದಾಗ ಏನೆಲ್ಲ ಆಗಿರಬಹುದು. ಆದರೆ, ಇದಕ್ಕೆ ಶರಾ ಬರಿಲಿಕ್ಕ ಇವರೆಲ್ಲ ಯಾರು? ಅಂತ ಅನ್ನುವಂತಿಲ್ಲ.

ಸಮಾಜದೊಳಗೆ ಪಾವಿತ್ರ್ಯವನ್ನು ಕಾಪಾಡುವಂತಹ ಗಂಡಸರು ಸುನಂದಳಂಥವರ ನೆರಳು ತಮ್ಮ ಮನೆಯ ಹೆಣ್ಣು ಮಕ್ಕಳ ಮೇಲೆ ಬೀಳದಂತೆ ಕಾಪಿಡುವ ಧರ್ಮಾತ್ಮರು.

ಇಂಥದ್ದಕ್ಕೆಲ್ಲ ಭಾಳ ದಿನ ತಲೆಕೆಡಿಸಿಕೊಂಡು ಕೂಡುವಂತಹ ಪರಿಸ್ಥಿತಿ ಸುನಂದಳಿಗಿಲ್ಲ. ಉರುಳಿದ ದಿನಗಳನ್ನು ಮರಳಿನಲ್ಲಿ ಪಾದವನ್ನು ಹೂತಿಟ್ಟು ಅದರ ಮ್ಯಾಲ ಗುಬ್ಬಿ ಮನೆ ಕಟ್ಟಿ ಕಾಲು ಹೊರಗ ಎಳೆದುಕೊಳ್ಳಬೇಕು. ಹೊಳಿ ನೀರಿನ ಹೊಡತಕ್ಕ ಗುಬ್ಬಿಮನಿ ನೀರಿನ ಪಾಲಾದಂಗ ಅವಳ ನೆನಪುಗಳು ಅವಳು ಮಾಡುವ ಘಮಘಮ ಸಾರಿನೊಳಗಿನ ಉಪ್ಪು ಕರಗಿದಂಗ ಕರಗಿ ಒಂದಾಗಿ ಬಿಡತಾವ. ನಂತರ ಯಥಾಪ್ರಕಾರ, ''ಸೀತೆ ಅಟ್ಟುವಳು. ರಾಮ ಉಂಬುವ. ಪಾಪಿ ಹುಳುವೇ ಹೊರಗೆ ಬಾ'' ಎಂದು ಸತತವಾಗಿ ಹೇಳುತ್ತಾ ಕಾಯಿರಸಕ್ಕ ಬೆಂಡಿಕಾಯಿ ಕೊಯ್ಯುತ್ತ ಅಡುಗೆಕೆಲಸದಲ್ಲಿ ಒಂದಾಗುವಳು.

★★★

''ಈ ಜಗತ್ತಿನೊಳಗೆ ಒಬ್ಬರಂಗೆ ಏಳು ಮಂದಿನ್ನ ಸೃಷ್ಟಿ ಮಾಡಿರ್ತಾನಂತ ಆ ದೇವ್ರು. ಸತ್ತವನೂ ಇವರಂಗೇ ಇರಬೇಕು'' ಗಟ್ಟಿಸಿ ಮಾತನಾಡಿದರೂ ಒಳಗೊಳಗೆ ಅಳುಕಿದಳು ಸುನಂದಾ.

ಮುದ್ನಾಳ ತಾಂಡಾದ ದಾರಿಯೊಳಗೆ ಹೆಣ ಸಿಕ್ಕಿತ್ತಂತ. ನಮ್ಮನಿಗೆ ಮಾವಿನ ಹಣ್ಣು ಮಾರಲಿಕ್ಕೆ ಬರುವ ಲಮಾಣಿ ಯಾಡಿ ನೋಡಿ, ''ಅಯ್ಯ.... ಈ ಯಪ್ಪ... ನಮ್ಮ ಹನುಮಂತ ದೇವರ ಪೂಜಾರಿ ಹಾನ. ನಾ ಹಮೇಶಾ ಆ ಬಾಯಿಮನಿಗಿ ಹೊಗತಿರತ್ತೀನಿ.'' ಎಂದು ಅಡ್ರೆಸ್ ಕೊಟ್ಟಳಂತೆ. ಹಂಗಾಗಿ ರಮೇಶ ಬಂದು ಸುನಂದಾಗ ಸಣ್ಣ ದನಿಯೊಳಗ, ''ಪ್ರಾಣೇಶಣ್ಣಾ ಹೋಗ್ಯಾರಂತ... ಸರ್ಕಾರಿ ದವಾಖಾನೆಗೆ ತಂದ ಹಾಕ್ಯಾರಂತ. ಹೋಗಿಬರೋಣು'' ಎಂದಾಗ ಅಪ್ರತಿಭಳಾದ ಸುನಂದಾ ಸತ್ತಂವಾ ಪ್ರಾಣೇಶ ಅಲ್ಲವೇ ಅಲ್ಲ ಎಂದು ಪಣ ಹಿಡಿದಳು. ಅಕ್ಕಪಕ್ಕದವರು ಬಂದು ಎಲ್ಲರೂ